ಶ್ರೀ ವಿ. ಶ್ರೀನಿವಾಸ್ ಪ್ರಸಾದ್ :– ಇಲ್ಲಿ ಈ ವಿಷಯದ ಚರ್ಚೆ ಬೇರೆ ರೂಪದಲ್ಲಿ ಬಂದಿಲ್ಲ. ಶೂನ್ಯ ವೇಳೆಯಲ್ಲಿ ನೀವೇನು ಪ್ರಸ್ತಾಪ ಮಾಡಿದ್ದೀರೋ ಅಷ್ಟಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಶಿವಮೂರ್ತಿ :– ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ನೋಡಿ, ಈಗ ಮಂತ್ರಿಗಳುin principle ಒಪ್ಪಿಕೊಂಡಿದ್ದಾರೆ. ನೀವು ಹೇಳಿರುವ ವಿಚಾರವನ್ನು ಮಾಡಿಕೊಡುತ್ತಾರೆ.

ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್ :– ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ...

ಅಧ್ಯಕ್ಷರು :– ನೀವು ಸಚಿವರಾಗಿದೀರಿ, ನೀವು ಮಾತನಾಡುವುದು ಬೇಡ, ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

ಡಾ: ಉಮೇಶ್ ಜಿ.ಜಾಧವ್ :– ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು :– ನೀವು ನೋಟಿಸ್ ಕೊಟ್ಟಿಲ್ಲ. ನೋಟಿಸ್ ಕೊಡಿ ಬೇರೆಯದಕ್ಕೆ ಅವಕಾಶ ಕೊಡೋಣ.

ಸಿ.ಟಿ ರವಿಯವರೆ, ತಾವು ಪ್ರಸ್ತಾಪ ಮಾಡಿ.

5. **ವಿಷಯ :– ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಮಿಲ್ಕ್ ಸೊಸೈಟಿಗಳವರು ತೆಗೆದು ಕೊಳ್ಳುತ್ತಿರುವ ಹಾಲಿಗೆ ಸೂಕ್ತ ಬೆಲೆಯನ್ನು ನೀಡದೆ ನಿರಾಕರಿಸುತ್ತಿರುವ ಬಗ್ಗೆ.**

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಹಕಾರಿ ಮಿಲ್ಕ್ ಯೂನಿಯನ್‌ನಲ್ಲಿ. ಸೊಸೈಟಿಗಳಲ್ಲಿ ಮಿಲ್ಕ್ low SNF ಇದೆಯೆಂದು ಹೇಳಿ ಅವರ ಹಾಲಿಗೆ ಬೆಲೆಯನ್ನೇ ನಿರಾಕರಿಸುತ್ತಿದ್ದಾರೆ. ಈಗ low SNF ಇದೆಯೆಂದು ಹೇಳಿ ಸ್ಪಾಟ್‌ನಲ್ಲೇ ಅವರ ಹಾಲನ್ನು ರಿಜೆಕ್ಟ್ ಮಾಡುತ್ತಿಲ್ಲ. ಸ್ಪಾಟ್‌ನಲ್ಲಿ ಹಾಲನ್ನು ಹಾಕಿಸಿಕೊಳ್ಳುತ್ತಾರೆ. ಹಾಲನ್ನು ಹಾಕಿಸಿಕೊಳ್ಳಬೇಕಾದರೆ ಡಿಗ್ರಿ ಚೆಕ್ ಮಾಡಿರುತ್ತಾರೆ, ಫ್ಯಾಟ್ ಚೆಕ್ ಮಾಡಿರುತ್ತಾರೆ, ಹೀಗೆ ಇವೆಲ್ಲವನ್ನೂ ಚೆಕ್ ಮಾಡಿರುತ್ತಾರೆ.

ಆಮೇಲೆ ಡೈರಿಗೆ ಹೋದನಂತರ ಲೋ ಎಸ್.ಎನ್.ಎಫ್. ನಿಂದ reject ಮಾಡಿದ್ದೇವೆಂದು ಹೇಳಿ ಕೇವಲ 4 ರೂಪಾಯಿ ರೇಟ್ ಹಾಕಿ, ಅದನ್ನು

ವಾಪಸ್ಸು ಕಳುಹಿಸುತ್ತಾರೆ. ಈ ರೀತಿ ನಮ್ಮ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ನಾಗರಾಳು, ದೇವರಕಾರೇಹಳ್ಳಿ, ಎಸಕೊಪ್ಪಲು, ಕಾಮೇನಹಳ್ಳಿ ಈ ಗ್ರಾಮಗಳಲ್ಲಿ ಒಂದೊಂದು ತಿಂಗಳು ಹಾಲಿನ ದುಡ್ಡನ್ನು cancel ಮಾಡಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಅವರು ಏನಿದ್ದರೂ accept or reject ಎನ್ನುವುದನ್ನು on spot ತೀರ್ಮಾನ ಮಾಡಬೇಕು. ಹಾಲು ಹಾಕಿಸಿಕೊಂಡ ಮೇಲೆ ಅದನ್ನು ನಿರಾಕರಿಸತಕ್ಕಂಥದ್ದು, ಒಂದು ರೀತಿ ಹಗಲು ದರೋಡೆ ಆಗಿದೆ. ಇದಕ್ಕೆ ಅವಕಾಶ ಕೊಡಬಾರದು. ರೈತರಿಗೆ ವಂಚನೆ ಆಗುತ್ತಿದೆ. ಈ ಸರ್ಕಾರ 4 ರೂಪಾಯಿ ಸಬ್ಸಿಡಿ ಘೋಷಣೆ ಮಾಡಿದೆ. ಆದರೆ ಹಾಲು ಹೆಚ್ಚಿಗೆ ಬರುತ್ತಿದೆಯೆಂದು ಹೇಳಿ ಈ ರೀತಿ ರಾಜಕೀಯವಾಗಿ ತಮಗೆ ಆಗದಿರುವಂತಹ ಸಹಕಾರ ಸಂಘಗಳನ್ನು ತಪ್ಪಿಸುವಂತಹ ಮತ್ತು ರೈತರಿಗೆ ತೊಂದರೆ ಕೊಡುವಂತಹ ಕೆಲಸ ವ್ಯಾಪಕ ಪ್ರಮಾಣದಲ್ಲಿ ಆಗುತ್ತಿದೆ. ರೈತರ ನೆರವಿಗೆ ಬರಬೇಕು,, ಆ ರೀತಿ ಹಾಲನ್ನು ನಿರಾಕರಿಸಬಾರದು.

ಅಧ್ಯಕ್ಷರು : ಈಗ ಶ್ರೀಮಾನ್ ಗೋವಿಂದ ಕಾರಜೋಳರವರು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು 2009 ರಂತೆ 8ನೇ ತರಗತಿಯನ್ನು ಸೇರ್ಪಡಿಸಿಕೊಳ್ಳುವ ಬಗ್ಗೆ ಕೇಳಿದ್ದಿರಲ್ಲಾ?

ಶ್ರೀ ಸಿ.ಟಿ ರವಿ,ಮಾನ್ಯ ಅಧ್ಯಕ್ಷರೆ, ನೀವು ಇದಕ್ಕೆ ಉತ್ತರ ಕೊಡಿಸಲಿಲ್ಲ.

ಅಧ್ಯಕ್ಷರು : ಕೊಡಲಿಲ್ಲವೇ? ನಾಳೆ ಕೊಡಿಸೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ರವಿಯವರು ನಿರ್ದಿಷ್ಟವಾಗಿ ಚಿಕ್ಕಮಂಗಳೂ ವಿಚಾರಕ್ಕೆ ಸಂಬಂಧಪಟ್ಟತೆ ಪ್ರಸ್ತಾಪ ಮಾಡಿದ್ದೀರಿ. ನಾನು ಮಾಹಿತಿಯನ್ನು ತರಿಸಿ ತಮಗೆ ನಾಳೆ ಉತ್ತರ ಕೊಡಿಸುತ್ತೇನೆ.

6. ವಿಷಯ : ಪುತ್ತೂರು ಉಪ್ಪಿನಂಗಡಿ ವಿಟ್ಲ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಾಣಿಜ್ಯ ವಿಭಾಗ, ಸೀಟು ಸಂಖ್ಯೆಗಳನ್ನು ಹೆಚ್ಚಿಸುವ ಬಗ್ಗೆ

ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಪುತ್ತೂರು ಕ್ಷೇತ್ರಕ್ಕೆ ಒಳಪಟ್ಟಂತೆ ನಾಲ್ಕು ದರ್ಜೆ ಕಾಲೇಜುಗಳಿವೆ. ಸಕಲೇಶಪುರದಿಂದ ಉಪ್ಪಿನಂಗಡಿಯವರೆಗೆ ಯಾವುದೇ ಒಂದು ಕಾಲೇಜು ಇಲ್ಲ. ಉಪ್ಪಿನಂಗಡಿಯಲ್ಲಿ ಪ್ರಥಮ ದರ್ಜೆ ಕಾಲೇಜು ಆಗಿ 30 ವರ್ಷಗಳಾಗಿವೆ. ಇನ್ನೊಂದು ಬೆಟ್ಟಂಪಾಡಿಯಲ್ಲಿ ಕಾಲೇಜು ಆಗಿ 22 ವರ್ಷವಾಗಿದೆ. ವಿಟ್ಲ ಮತ್ತು